


**ಆನೆಗಳ ಅಪಾರ ಮಾಹಿತಿ**

'ಸುಧಾ' ಜೂನ್7ರ ಮುಖಪುಟ ಲೇಖನ ರಾಜೇಶ್ ಶ್ರೀವನ ಅವರ 'ಸರ್ಕಾರಿ ಆನೆಗಳ ನಿವೃತ್ತ ಜೀವನ' ಆನೆಗಳ ಜೀವನ ಕ್ರಮ ಹಾಗೂ ಅವುಗಳ ಆರೈಕೆ ಬಗ್ಗೆ ಅನೇಕ ಸಂಗತಿಗಳನ್ನು ತಿಳಿಸಿಕೊಟ್ಟಿದೆ.

–ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ವೈ.ಎಂ.ಚಂದ್ರಶೇಖರ್, ಸಿದ್ದಾಪುರ

**ನಾಡಿನಲ್ಲಿ ಬಿಳಿಯಾನೆಗಳು!**

ಕಾಡಿನಲ್ಲಿ ಸ್ವಚ್ಛಂದವಾಗಿರುವ ಆನೆಯನ್ನು ಗೋಡೆಗಳ ಮಧ್ಯೆ ಕಟ್ಟಿಹಾಕಿ ನರರಿಗೆ ಸಲಾಂ ಹೊಡೆಯುವ ಕೆಲಸ ನೀಡುವುದು ಕ್ರೌರ್ಯವಲ್ಲದೆ ಮತ್ತಿನ್ನೇನು? ಆನೆಗಳಿಗೆ ಕಾಡಿನಲ್ಲಿಯೇ ಸಮೃದ್ಧಿ ಮತ್ತು ಸುರಕ್ಷೆ ವ್ಯವಸ್ಥೆ ಮಾಡುವುದು ಸರ್ಕಾರದ ಹೊಣೆ.

ಕರಿ(ಆನೆ)ಗಳು ಕಾಡಿನಲ್ಲಿರಲಿ, ನಾಡಿನಲ್ಲಿ ನಮ್ಮ ನರಿಗಳಿವೆಯಲ್ಲ? ಐಎಎಸ್, ಐಪಿಎಸ್ ಎಂಬ ನರಿಗಳು ಸರ್ಕಾರಿ ಆನೆಗಳೇ ತಾನೇ? ಕಾಡಿನಲ್ಲಿ ಇರುವವು ಕರಿಯಾನೆಗಳಾದರೆ, ಇವು ಬಿಳಿಯಾನೆಗಳು!

–ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

**ಸರ್ಕಾರಿ ಶಾಲೆಗಳೇ ವಾಸಿ**

ಸರ್ಕಾರಿ ಶಾಲೆಗಳ ಕುರಿತ ಸುಮಂಗಲಾ ಲೇಖನ ಸಕಾಲಿಕವಾಗಿತ್ತು. ಸರ್ಕಾರಿ ಶಾಲೆಗಳೆಂದರೆ ಕಡಿಮೆಯಲ್ಲ, ಅವುಗಳ ಬಗ್ಗೆ ಅನಾದರವೂ ಸಲ್ಲದು. ಒಳ್ಳೆಯ ಸಿಬ್ಬಂದಿ ಮೂಲಸೌಕರ್ಯ ಸರ್ಕಾರಿ ಶಾಲೆಗಳಲ್ಲೇ ಉತ್ತಮವಾಗಿದೆ. ಸರಿಯಾಗಿ ಸಂಬಳ ನೀಡದೆ ಶೋಷಿಸುವ ಖಾಸಗಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಕರು ಬರಲು ಹೇಗೆ ಸಾಧ್ಯ?

–ಪಿ.ಎಸ್. ನಾರಾಯಣ ಭಟ್ ಕೊಯಿಲ, ಪುತ್ತೂರು/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

**ತಂಬಾಕಿನ ದುಷ್ಪರಿಣಾಮ**

ಕೆ. ರಾಘವೇಂದ್ರರ 'ತಂಬಾಕಿನ ಮಜಾ; ಜೀವಕ್ಕೆ ಸಜಾ' ವಿಶ್ವ ತಂಬಾಕು ರಹಿತ ದಿನದ ಮಹತ್ವ ಸಾದರಪಡಿಸಿದ ಜತೆಗೆ, ಹೊಗೆಯ ದುಷ್ಪರಿಣಾಮಗಳನ್ನು ವಿಶದವಾಗಿ ತಿಳಿಸಿಕೊಟ್ಟಿತು.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ

**ಕಿಪ್ಲಿಂಗ್ ಅಲ್ಲ, ಕೀಟ್ಸ್**

'ನೀವು ಕೇಳಿದಿರಿ?' ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ರಾಮ್ ಅವರು 'ಎ ಥಿಂಗ್ ಆಫ್ ಬ್ಯೂಟಿ ಈಸ್ ಎ ಜಾಯ್ ಫಾರೆವರ್' ಎಂದು ಕಿಪ್ಲಿಂಗ್ ಹೇಳಿದ್ದಾನೆ ಎನ್ನುತ್ತಾರೆ. ಆದರೆ ಈ ಪ್ರಸಿದ್ಧ ಸಾಲುಗಳನ್ನು ಬರೆದವನು ಜಾನ್ ಕೀಟ್ಸ್ ಎಂಬ ಕವಿ, ಕಿಪ್ಲಿಂಗ್ ಅಲ್ಲ.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

**ಮುತ್ತಿನಂತಹ ಮಾತು!**

'ಮಾತೇ ಮುತ್ತು' ಚಿಂತನಾರ್ಹವಾಗಿರುತ್ತವೆ. 'ಪುಸ್ತಕಗಳು ಇನ್ನೂ ಹುಟ್ಟದಿರುವ ಜನಾಂಗದ ಆಸ್ತಿ' ಎಂಬ ಮುತ್ತು ಇದಕ್ಕೊಂದು ಉತ್ತಮ ಉದಾಹರಣೆ. ಈ ಕಾಲಂ ಅಡಿ ಪ್ರಕಟಿತ ಎಲ್ಲರ ಹೇಳಿಕೆಗಳೂ ನಿಜಕ್ಕೂ 'ಮುತ್ತಿ'ನಂತಿವೆ.

–ನಾರಾಯಣ ಯಾಜಿ, ಶಿರಾಲಿ

**'ಪಾಂಚಾಲಿ' ಮನೋಜ್ಞ ಕಥೆ**

ಶಿವಮೂರ್ತಿ ನಂದನ ಹೊಸೂರು ಅವರ 'ಪಾಂಚಾಲಿ' ಕಥೆ ಚೆನ್ನಾಗಿ ಮೂಡಿ ಬಂದಿದೆ. ದ್ರೌಪದಿಯ ದೃಷ್ಟಿಯಿಂದ ಇಡೀ ಮಹಾಭಾರತದ ತಿರುಳನ್ನು ಸೊಗಸಾಗಿ ಮೂರು ಪುಟಗಳಲ್ಲಿ ಸೆರೆ ಹಿಡಿದದ್ದು ಪ್ರಶಂಸನೀಯ. 'ಸುಧಾ'ದಲ್ಲಿ ಇದೇ ರೀತಿ ಹಿಂದೆ 'ಶಕುಂತಲಾಳ ಸ್ವಗತ' ಪ್ರಕಟವಾಗಿತ್ತು.

–ಗೋಪಾಲ ಆಶ್ರಿತ, ಬೆಂಗಳೂರು

**ಕಥೆಗೆ ಸೊಗಸಾದ ಚಿತ್ರ**

'ಪಾಂಚಾಲಿ' ಮತ್ತೆ ಮಹಾಭಾರತವನ್ನು ನೆನಪಿಸಿತು. ಓದುಗರಿಗೆ ಹೊಸತನ್ನು ನೀಡಿದೆ. ಕಥೆಗಾರರ ನಿರೂಪಣೆ ಉತ್ತಮ. ಪಾಂಚಾಲಿಯ ಮನಸ್ಥಿತಿ ಹಾಗೂ ಪಾಂಡವರ ಅಸಹಾಯಕತೆಯನ್ನು ಸಾಂಕೇತಿಕವಾಗಿ ಹಾಗೂ ಸಮರ್ಥವಾಗಿ ಸೆರೆಹಿಡಿದ ಮನೋಹರ ಚಿತ್ರ ಸೊಗಸಾಗಿತ್ತು. ಹಳದಿ ಬಣ್ಣದ ಸಂಯೋಜನೆ ಔಚಿತ್ಯಪೂರ್ಣವಾಗಿತ್ತು.

–ಕೊಹಿಮ, ಬಸರಕೋಡು/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

**ಪೌರಾಣಿಕ ಕಥೆ ಇರಲಿ**

'ಪಾಂಚಾಲಿ' ಚಿತ್ರ ಕಥೆ ಚೆನ್ನಾಗಿತ್ತು. ಪುರಾಣ ಹಾಗೂ ಐತಿಹಾಸಿಕ ಕಥೆಗಳನ್ನು 'ಸುಧಾ' ಆಗಿಂದಾಗ್ಗೆ ಪ್ರಕಟಿಸಲಿ ಎಂದು ವಿನಂತಿ.

–ಸು.ವಿಜಯಲಕ್ಷ್ಮಿ, ಶಿವಮೊಗ್ಗ

**ಜೂಜುಕೋರ, ಮಾಂಸದ ಮುದ್ದೆ!**

'ಪಾಂಚಾಲಿ' ಕಥೆಯ ಓದು ಅಸಹನೀಯ ಎನಿಸಿತು. ಅವಿವೇಕಿ, ದುರಹಂಕಾರಿ ದ್ರುಪದ; ಸಂಚುಗಾರ, ಸ್ವಾರ್ಥಿ, ಪಾಪಿ ಕುಂತಿ; ಸೋಮಾರಿ, ಹೇಡಿ, ಜೂಜುಕೋರ ಧರ್ಮರಾಯ; ಮಹಾ ಹುಂಬ, ಮಾಂಸದ ಮುದ್ದೆ ಭೀಮ.... ಅಬ್ಬಾ! ಒಂದೇ.. ಎರಡೇ... ಓದಲಾಗದಷ್ಟು ಇಂತಹ ಪದಗಳೇ ತುಂಬಿವೆ. ಭಾಷೆಯ ಬಳಕೆಯಲ್ಲಿ ಶಿವಮೂರ್ತಿ ಸಂಯಮ ಕಳೆದುಕೊಂಡಿದ್ದಾರೆ. ಕಥೆ ಪ್ರಕಟಣೆಗೆ ಯೋಗ್ಯವಾಗಿಲ್ಲ.

–ನಾ.ರಾ.ಜ್ಯೋತಿ, ಬೆಂಗಳೂರು

**ಸಾಲ ಮನ್ನಾ?**

ಮೇ 31ರ 'ಸುಧಾ' ಸಂಚಿಕೆಯ ವೈನತೇಯರ ವಿಚಾರ ಲಹರಿಯಲ್ಲಿ– ಸಾಕ್ರಟೀಸ್ ಸಾಯು ವಾಗಲೂ ತಾನು ನೆರೆಮನೆಯವನಿಂದ ಸಾಲವಾಗಿ ಪಡೆದ ಹುಂಜವನ್ನು ಹಿಂದಿರುಗಿಸುವಂತೆ ಕೇಳಿ ಕೊಳ್ಳುತ್ತಾನೆ. ಆದರೆ ನಮ್ಮ ಎಷ್ಟೋ ರೈತರು ತಮ್ಮ ಸಾಲ ಮನ್ನಾ ಮಾಡುವಂತೆ ಸರಕಾರವನ್ನು ಕೇಳಿಕೊಳ್ಳುತ್ತಾರೆ! ಹೇಗಿದೆ ನೋಡಿ 'ಸಾಲದ ಋಣ' ತೀರಿಸುವುದು.

–ರಾಜಶೇಖರ ಹಾದಿಮನಿ, ಧಾರವಾಡ

**ಸಕ್ಕರೆ ಅಂಶದ ಪರೀಕ್ಷೆ**

ಕಳೆದ ವಾರದ 'ಪ್ರತಿ ವರ್ಷ ಚೆಕ್ ಅಪ್ ಮಾಡಿಸ್ತಿದ್ದೀರಾ?' ಎಂಬ ನನ್ನ ಲೇಖನದಲ್ಲಿ ರಕ್ತದಲ್ಲಿನ ಸಕ್ಕರೆಯ ಅಂಶದ ಪರೀಕ್ಷೆ ಬಿಟ್ಟುಹೋಗಿದೆ. ಸಾಮಾನ್ಯವಾಗಿ 35ರ ಆಸುಪಾಸಿನಲ್ಲಿ ದೇಹಕ್ಕೆ ಜೊತೆಯಾಗುವ ಮಧುಮೇಹ ಕಾಯಿಲೆಯ ಪತ್ತೆಗೆ ಈ ಪರೀಕ್ಷೆ ಸಹಕಾರಿ.

–ಡಾ.ವಿನಯ ಶ್ರೀನಿವಾಸ್, ಶಿವಮೊಗ್ಗ

